ದಿನಾಂಕ-05-11-2022 ರಂದು ಸಮಯ ಬೆಳಿಗ್ಗೆ 10.30 ಗಂಟೆಗೆ ವಾರ್ಡ ಸಂಖ್ಯೆ-52 ಮಹಾಲಕ್ಷ್ಮೀಪುರಂ ವಾರ್ಡ ಕಛೇರಿಯಲ್ಲಿ ವಾರ್ಡ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು..

<u>ಹಾಜರಿದ್ದ ಅಧಿಕಾರಿಗಳು</u>

1. ಶ್ರೀ. ಹೆಚ್ ರಂಗನಾಥ ನೋಡಲ್ ಅಧಿಕಾರಿಗಳು (ಅಧ್ಯಕ್ಷರು)
2. ಶ್ರಿ ನಂಜುಂಡಪ್ಪ ಜಿ ವಿ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು)
3. ಜಿ ಟಿ ಧನಂಜಯ ಸಹಾಯಕ ಅಭಿಯಂತರರು ವಾರ್ಡ-52
4. ಶ್ರಿ ಲೋಹಿತ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
5. ಶ್ರೀಮತಿ ಗೀತಾ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
6. ಶ್ರಿಮತಿ ಸ್ಮಿತಾ ಕಂದಾಯ ವಸೂಲಿಗಾರರು ವಾರ್ಡ-52
7. ಶ್ರೀ ಕಾಂತರಾಜು ಬೀದಿ ದೀಪ ಗುತ್ತಿಗೆದಾರರು (ಎಲ್. ಇ ಡಿ ಲೈಟ್ಸ್)
8. ಯೋಗೇಶ್ ಮಾರ್ಷಲ್ ವಾರ್ಡ-52
9. ಪುಷ್ಪ ಸಹಾಯಕ ಅಭಿಯಂತರರು BWSSB.
10. ನಾರಾಯಣ್ ನಿವಾಸಿಗಳು ಸರಸ್ವತಿಪುರಂ ವಾರ್ಡ-52
11. ತೇಜಸ್ವಿನಿ ಕೆ. ಜೆ ಸಿ ನಗರ ನಿವಾಸಿಗಳು.
12. ಬಸವರಾಜು ನಿವಾಸಿಗಳು ಗೆಳೆಯರ ಬಳಗ.
13. ಭೀಮರಾಜು ಬಿ ಸಿ ಕಾರ್ಯದರ್ಶಿ ಗೆಳೆಯರ ಬಳಗ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.
14. ಗೋವಿಂದರಾಜು ನಿವಾಸಿಗಳು ಗೆಳೆಯರ ಬಳಗ.
15. ಜಯಸಿಂಹ ಆರ್ ನಿವಾಸಿಗಳು ಗೆಳೆಯರ ಬಳಗ.
16. ಮುನಿರಾಜು ಆರ್ ಜೆ ಸಿ ನಗರ ನಿವಾಸಿಗಳು.
17. ಆಮಿತ್ ರುಬೆಲ್ಲೋ ಮಹಾಲಕ್ಷ್ಮೀಪುರಂ ನಿವಾಸಿಗಳು.
18. ಮೋಹನ್ ಕುಮಾರ್ ಎ ಕೆ ಆರ್ ಎಸ್ ಪಕ್ಷದ ಪ್ರತಿನಿದಿ ಮಹಾಲಕ್ಷ್ಮೀಪುರಂ.

ಶ್ರಿ ನಂಜುಂಡಪ್ಪ ಜಿ ವಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಓದಿ ತಿಳಿಸಿದರು.

ಈ ದಿನದ ಸಭೆಯಲ್ಲಿ ಚರ್ಚಿಸಿದ ಹಾಗೂ ಕ್ರಮವಹಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ವಿವರ | ಕ್ರಮ |
|---|---|---|
| 01 | ಸನ್ಮಿತ್ರ ಗಣಪತಿ ದೇವಸ್ಥಾನದ ಹತ್ತಿರ, ಗೆಳೆಯರ ಬಳಗ ಸರ್ಕಲ್ ಹಾಗೂ ಐ ಪಿ ಪಿ ಆಸ್ಪತ್ರೆ ಹತ್ತಿರ ಮೋರಿಯಲ್ಲಿ ಮಣ್ಣು ತುಂಬಿಕೊಂಡಿದ್ದು ತೆರವುಗೊಳಿಸುವ ಬಗ್ಗೆ ಗೆಳೆಯರ ಬಳಗ ನಿವಾಸಿ ಬಸವರಾಜ್ ರವರ ದೂರಿನ ಬಗ್ಗೆ | ಸಹಾಯಕ ಅಭಿಯಂತರರು ವಾರ್ಡ-52 |

| | | |
|---|---|---|
| 02 | ಗೆಳೆಯರ ಬಳಗದ 3 ನೇ ಅಡ್ಡರಸ್ತೆ, ಮನೆ ನಂ-111 ಮುಂಭಾಗದಲ್ಲಿ ಮರ ಅಪಾಯಕಾರಿಯಾಗಿ ಭಾಗಿರುವುದನ್ನು ತೆರವುಗೊಳಿಸುವುದರ ಬಗ್ಗೆ. | ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಪಶ್ಚಿಮ ವಲಯ, ಬಿ ಬಿ ಎಂ ಪಿ, ಮಲ್ಲೇಶ್ವರಂ, ಬೆಂ. 560003 |
| 03 | ಗೆಳೆಯರಬಳಗ ಬಡಾವಣೆಯಲ್ಲಿ ಅಳವಡಿಸಿರುವ ಸಿ ಸಿ ಟೀವಿ ಕ್ಯಾಮರಗಳ ಕಾರ್ಯನಿರ್ವಹಣೆ ಸ್ಥಗಿತಗೊಂಡಿದ್ದು, ಕಾರ್ಯನಿರ್ವಹಣೆಗೆ ಅಗತ್ಯ ಕ್ರಮಕೈಗೊಳ್ಳಲು ಮನವಿ. | ಸಹಾಯಕ ಅಭಿಯಂತರರು ವಾರ್ಡ-52 |
| 04 | ಗೆಳೆಯರಬಳಗ ಸರ್ಕಲ್ ನಲ್ಲಿ ಇದ್ದ ಹೈ-ಮಾಸ್ಟ ದೀಪ ತೆರವುಗೊಳಿಸಿದ್ದು, 15 ದಿನಗಳ ಒಳಗಾಗಿ ಪುನರ್ ಸ್ಥಾಪಿಸಬೇಕು, ಇಲ್ಲದೆ ಇದ್ದಲ್ಲಿ ಕೇಂದ್ರ ಕಛೇರಿಯ ಮುಂದೆ ಧರಣಿ ನಡೆಸುವುದಾಗಿ ಕೆ ಆರ್ ಎಸ್ ಪಕ್ಷದ ಪ್ರತಿನಿಧಿ ಮೋಹನ್ ಕುಮಾರ್ ರವರು ಆಗ್ರಹಿಸಿರುತ್ತಾರೆ. | ಕಾರ್ಯಪಾಲಕ ಅಭಿಯಂತರರು ಬೀದಿ ದೀಪ ಪಶ್ಚಿಮ ವಲಯ, ಬಿ ಬಿ ಎಂ ಪಿ ಮಲ್ಲೇಶವರಂ, ಬೆಂ. 560003. ಹಾಗೂ ಗುತ್ತಿಗೆದಾರರು ಬೀದಿ ದೀಪ |
| 05 | ವಾರ್ಡ -52 ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಬಗ್ಗೆ. | ಸಹಾಯಕ ಅಭಿಯಂತರರು ವಾರ್ಡ-52 |
| 06 | ಕುರುಬರಹಳ್ಳಿ ಪೈಪ್-ಲೈನ್ ರಸ್ತೆ ಪಾರ್ಕ ಒಳಭಾಗದಲ್ಲಿರುವ ಕಸ ವಿಲೇವಾರಿ ಮಾಡುವ ಬಗ್ಗೆ | ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ ಪಶ್ಚಿಮ ವಲಯ, ಬಿ ಬಿ ಎಂ ಪಿ, 8 ನೇ ಅಡ್ಡರಸ್ತೆ, ದತ್ತಾತ್ರೇಯ ದೇವಸ್ಥಾನದ ಹತ್ತಿರ, ಮಲ್ಲೇಶ್ವರಂ, ಬೆಂ. 560003 |
| 07 | ಐ ಪಿ ಪಿ ಆಸ್ಪತ್ರೆಯ ಕಾಪೌಂಡ ಒಳಭಾಗದಲ್ಲಿ ಶುಚಿತ್ವ ಕಾಪಾಡುವ ಬಗ್ಗೆ ಸಾರ್ವಜನಿಕರ ದೂರಿನ ಬಗ್ಗೆ | ಆರೋಗ್ಯ ಅಧಿಕಾರಿ ಐ ಪಿ ಪಿ ಆಸ್ಪತ್ರೆ |
| 08 | ಐ ಪಿ ಪಿ ಆಸ್ಪತ್ರೆಯ ಹತ್ತಿರ ಇದ್ದ ಮರವನ್ನು ಅನಧಿಕೃತವಾಗಿ ಕತ್ತರಿಸಿದ್ದು, ಕತ್ತರಿಸಿದ ಮರವನ್ನು ತೆರವುಗೊಳಿಸಿರುವುದಿಲ್ಲ ಆದ್ದರಿಂದ ಈ ಸ್ಥಳದಿಂದ ಕತ್ತರಿಸಲ್ಪಟ್ಟ ಮರವನ್ನು ತೆರವುಗೊಳಿಸಲು ಹಾಗೂ ಅನಧಿಕೃತವಾಗಿ ಮರ ಕತ್ತರಿಸಿದವರ ಮೇಲೆ ಕ್ರಮ ಕೈಗೊಳ್ಳುಲು ಕೆ ಆರ್ ಎಸ್ ಪಕ್ಷದ ಎ ಮೋಹನ್ ಕುಮಾರ್ ರವರು ಆಗ್ರಹಿಸಿರುತ್ತಾರೆ. | ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು ಪಶ್ಚಿಮ ವಲಯ, ಬಿ ಬಿ ಎಂ ಪಿ, ಮಲ್ಲೇಶ್ವರಂ, ಬೆಂ. 560003 |
| 9 | ವಾರ್ಡ-52-ಮಹಾಲಕ್ಷ್ಮೀಪುರಂ ವಾರ್ಡ ಕಛೇರಿಯಲ್ಲಿ ಶೌಚಾಲಯ ದುರಸ್ಥಿಗೊಳಿಸುವ ಬಗ್ಗೆ. | ಸಹಾಯಕ ಅಭಿಯಂತರರು ವಾರ್ಡ-52 |
| 10 | ಗೆಳೆಯರಬಳಗ ಶಿವಕುಮಾರ್ ಸ್ವಾಮಿಜಿ ಪಾರ್ಕನಲ್ಲಿರುವ ಜಿಮ್ – ಇಕ್ಯೂಪ್ಮೆಂಟ್ ದುರಸ್ಥಿಗೊಳಿಸಲು ಮನವಿ. | ಸಹಾಯಕ ಅಭಿಯಂತರರು ವಾರ್ಡ-52 |

ಈ ಮೇಲಿನ ಎಲ್ಲಾ ಸಮಸ್ಯೆಗಳ ಬಗ್ಗೆ ವಾರ್ಡ ಸಮಿತಿ ಸಭೆಯಲ್ಲಿ ಚರ್ಚಿಸಿ ಸಂಬಂದಪಟ್ಟ ಅಧಿಕಾರಿಗಳಿಗೆ ಕ್ರಮವಹಿಸಲು ತಿಳಿಸುತ್ತಾ ಕೈಗೊಂಡ ಕ್ರಮದ ಬಗ್ಗೆ ವರದಿಯೊಂದಿಗೆ ಮುಂದಿನ ವಾರ್ಡಕಮಿಟಿ ಸಭೆಗೆ ತಪ್ಪದೆ ಹಾಜರಾಗಿ ಸಲ್ಲಿಸಲು ಸೂಚಿಸಲಾಯಿತು ನಂತರ ಬೇರೆ ಯಾವುದೇ ವಿಷಯಗಳು ಚರ್ಚೆಗೆ ಇಲ್ಲದ ಕಾರಣ ಅಧ್ಯಕ್ಷರು ಮತ್ತು ಸದಸ್ಯರ ಅನುಮತಿಯಮೇರೆಗೆ ಸದರಿ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

5/11/2022

ನೋಡಲ್ ಅಧಿಕಾರಿ (ಅಧ್ಯಕ್ಷರು)
ವಾರ್ಡ ಕಮಿಟಿ ವಾರ್ಡ-52
ಮಹಾಲಕ್ಷ್ಮೀಪುರಂ